

ಬಂಡೆಗುಳಿಗಳು

# ತುಂಗಭದ್ರೆಯರು ಕಡೆದ ಶಿಲ್ಪಗಳು



ನದಿಯಾಳದಲ್ಲಿ ಸಾವಿರಾರು ವರ್ಷಗಳಿಂದ ನೀರಿನ ಹರಿವಿಗೆ ಸಿಕ್ಕಿದ್ದ ಬಂಡೆಗಲ್ಲುಗಳು ನಾನಾ ರೂಪು ಪಡೆದು ನೈಸರ್ಗಿಕ ಶಿಲ್ಪಗಳಂತಾಗಿವೆ. ಕಲ್ಲುಗುಂಡುಗಳು, ಹಾಸುಬಂಡೆಗಳ ವಿಚಿತ್ರ ಆಕಾರಗಳಲ್ಲೂ ಎದ್ದು ಕಾಣಿಸುವ ಸೌಂದರ್ಯ.

**■ ಮಲ್ಲಿಕಾರ್ಜುನ ಹೊಸಪಾಳ್ಯ**

'ಏನ್ ಸಖತ್ತಾಗಿದೇರಿ ಇದು...'

'ಇಲ್ನೋಡು, ಇದು ಚಂದಿ!'

'ಅನ್‌ಬಿಲೀವಬಲ್! ವಾಪಸ್ ಹೋಗೋದೇ ಬೇಡ ಇಲ್ಲೇ ಇದ್ ಬಿಡ್ತೀನಿ'. ಹೀಗೆ ಗೆಳೆಯ ಹೆಜ್ಜೆಹೆಜ್ಜೆಗೂ ಉದ್ಗಾರ ತೆಗೆಯುತ್ತಿದ್ದರೆ, ಸ್ಥಳೀಯ ಮಾರ್ಗದರ್ಶಿಯಾಗಿ ನಮ್ಮ ಜತೆ ಬಂದಿದ್ದ ಬಸಯ್ಯನಿಗೆ ಅಯೋಮಯ. ಯಃಕಶ್ಚಿತ್ ಕಲ್ಲುಗಳನ್ನು ನೋಡಿ ಇವರು ಯಾಕೆ ಹೀಗೆ ಎಗರೆಗರಿ ಬೀಳುತ್ತಿದ್ದಾರೆ ಎಂಬ ಗೊಂದಲದ ಭಾವ. ತಡೆಯಲಾರದೆ ಹೇಳಿಯೇಬಿಟ್ಟರು.

'ನದಿ ಉದ್ದೂಕು ಜಗ್ಗಿ ಅದಾವ ಸರ್ ಇಂತಾವು...'

ಜಗ್ಗಿ ಅಂದರೆ ಏನೆಂದು ಗೆಳೆಯನಿಗೆ ಗೊಂದಲ. ಅವನ ಪ್ರಕಾರ 'ಜಗ್ಗಿ' ಎಂದರೆ ಎಳೆಯುವುದು.

'ಜಗ್ಗಿ ಅಂದ್ರೆ?'

ಎತ್ತಿನ ಭುಜದಂತೆ ಕಾಣುವ ಶಿಲ್ಪ

